# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2020** |
| ಉತ್ತರಿಸಬೇಕಾದ ದಿನಾಂಕ | : | 17.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಬನಶಂಕರಿ 3 ನೇ ಹಂತ ಮಂಜುನಾಥ್ ಕಾಲೋನಿಯಲ್ಲಿರುವ ಕೆಲವು ಗುಡಿಸಲುಗಳು 2003 ರಲ್ಲಿ ಆಕಸ್ಮಿಕ ಬೆಂಕಿಗೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಘಟನೆಯಲ್ಲಿ ಗುಡಿಸಲುಗಳನ್ನು ಕಳೆದು ಕೊಂಡ ನಿರಾಶ್ರಿತರಾವರ ಸಂಖ್ಯೆ ಎಷ್ಟು ; | ಬಂದಿದೆ.<br>ಬೆಂಗಳೂರು ನಗರದ ಬನಶಂಕರಿ 3 ನೇ ಹಂತ ಮಂಜುನಾಥ್ ಕಾಲೋನಿಯು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಾಯ್ದೆ ಪ್ರಕಾರ ದಿನಾಂಕ:10.12.1997 ರಲ್ಲಿ ಘೋಷಣೆಯಾಗಿರುತ್ತದೆ. ದಿನಾಂಕ:25.11.2003 ರಂದು ಸದರಿ ಕೊಳಚೆ ಪ್ರದೇಶದ ಗುಡಿಸಲುಗಳಿಗೆ ಆಕಸ್ಮಿಕ ಬೆಂಕಿ ಬಿದ್ದು, ಗುಡಿಸಲುಗಳು ಸುಟ್ಟು ಹೋಗಿರುತ್ತದೆ. ಆಕಸ್ಮಿಕ ಬೆಂಕಿ ಬಿದ್ದ ಸಂದರ್ಭದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ಮಹಜರ್ ಮಾಡಿದ್ದು, ಮಹಜರ್ ವರದಿಯ ಪ್ರಕಾರ 25 ಗುಡಿಸಲುಗಳಲ್ಲಿ ನಿವಾಸಿಗಳು ವಾಸವಾಗಿರುತ್ತಾರೆ. |
| ಆ) | ಈ ಘಟನೆಯಲ್ಲಿ ಗುಡಿಸಲು ಕಳೆದು ಕೊಂಡವರಿಗೆ ಸರ್ಕಾರ ಪರಿಹಾರ ನೀಡಿ ಪುನರ್ವಸತಿ ಕಲ್ಪಿಸಿದೆಯೇ ; | ಸದರಿ ಗುಡಿಸಲು ಕಳೆದು ಕೊಂಡವರಿಗೆ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪರಿಹಾರವನ್ನು ನೀಡಲಾಗಿದ್ದು, ಮಂಡಳಿಯ ವತಿಯಿಂದ ವಾಂಬೇ ವಸತಿ ಯೋಜನೆಯಲ್ಲಿ 25 ಮನೆಗಳನ್ನು ನಿರ್ಮಿಸಿ, ಪುನರ್ವಸತಿ ಕಲ್ಪಿಸಲಾಗಿದೆ. |
| ಇ) | ಈ ಘಟನೆಯಲ್ಲಿ ಬೆಂಕಿಯನ್ನು ನಂದಿಸಲು ವಾಹನ ಸಂಚಾರಕ್ಕಾಗಿ ಕೆಲವು ಗುಡಿಸಲುಗಳನ್ನು ಸ್ಥಳಾಂತರಗೊಳಿಸಿದ್ದು, ಇವರುಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆಯೇ ; | ಘಟನೆ ಸ್ಥಳಕ್ಕೆ ಬೆಂಕಿ ನಂದಿಸಲು ಹೋಗಲು ವಾಹನ ಸಂಚಾರಕ್ಕಾಗಿ ಗುಡಿಸಲು ತೆರವುಗೊಳಿಸಿರುವ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳ ಮಹಜರ್ ವರದಿಯಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. |
| ಈ) | ಈ ಪ್ರದೇಶವು ಬಿ.ಡಿ.ಎ ಸ್ವಾಧೀನದಲ್ಲಿದ್ದು, ಗುಡಿಸಲು ಪ್ರದೇಶದ ಪಕ್ಕದಲ್ಲಿ (ಚನ್ನಮ್ಮಕೆರೆ ಪೊಲೀಸ್ ಠಾಣೆ ಮುಂಭಾಗ ಕತ್ರುಗುಪ್ಪೆ ಸ.ನಂ.10/120 ರ ಖಾಲಿ ಜಾಗದಲ್ಲಿ ಬೆಂಕಿ | ಮಂಜುನಾಥ ಕಾಲೋನಿ ಕೊಳಚೆ ಪ್ರದೇಶದ ಜಮೀನು ಬಿ.ಡಿ.ಎ ಮಾಲೀಕತ್ವದಲ್ಲಿ ಇರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ಮಹಜರ್ ವರದಿಯಲ್ಲಿ ಪ್ರಸ್ತಾಪಿಸಿರುವ ಕುಟುಂಬಗಳಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಮನೆಗಳನ್ನು |

| | | |
|---|---|---|
| | ಅವಗಡದಿಂದ ಪರಿಹಾರ ವಂಚಿತರಾದವರಿಗೆ ನಿವೇಶನಗಳನ್ನು ಹಂಚಲು ಸರ್ಕಾರ ಉದ್ದೇಶಿಸಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು) | ನಿರ್ಮಿಸಿ, ಹಂಚಿಕೆ ಮಾಡಲಾಗಿದ್ದು, ಬೆಂಕಿ ಅವಗಡದಿಂದ ಪರಿಹಾರ ವಂಚಿತರಾದವರಿಗೆ ನಿವೇಶನಗಳನ್ನು ಹಂಚಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ :ವಇ 60 ಎಸ್‌ಬಿಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು